

# ‘ಪ್ರತಿ ಪಾತ್ರವೂ ಕಲಾವಿದನಾಗಿ ವಿಸ್ತರಣೆ...

ಹೊಸ ಸಾಧ್ಯತೆಗಳನ್ನು ಸದಾ ಹುಡುಕುವ ನಟ **ಸಂಪತ್ ಕುಮಾರ್** ಅಪ್ಪಟ ರಂಗಭೂಮಿ ಪ್ರತಿಭೆ. ಸಾಲುಸಾಲು ಸಿನಿಮಾಗಳಲ್ಲಿ ನಟಿಸುತ್ತಿರುವ ಅವರು, ತಮ್ಮ ಸಹಜ ನಟನೆಯಿಂದಲೇ ಹಿರಿತೆರೆಯಲ್ಲಿ ಅವಕಾಶಗಳನ್ನು ಸೃಷ್ಟಿಸಿಕೊಂಡಿದ್ದಾರೆ.

■ ಸುಮಲತಾ ಎನ್

‘ನಟನೆಗೆ ಮೂಲ ತಯಾರಿ ಇರಬೇಕು. ಅತಿಯಾದ ಸಿದ್ಧತೆ ಕೂಡ ಕಲಾವಿದನಿಗೆ ಅಪಾಯಕಾರಿ. ಪಾತ್ರವೊಂದಕ್ಕೆ ಸಿದ್ಧರಾಗುತ್ತಾ ನಾವು ಅಷ್ಟರ ಮಿತಿಯೊಳಗೇ ಸಿಲುಕಿಬಿಡುತ್ತೇವೆ. ಅದಕ್ಕೇ ಅಂಟಿಕೊಂಡು, ಅದರಾಚೆಗಿನ ಸಾಧ್ಯತೆಗಳಿಗೆ ತೆರೆದುಕೊಳ್ಳುವುದೇ ಇಲ್ಲ. ಆದರೆ ನಟಿಸುತ್ತಲೇ, ಆ ಪಾತ್ರವನ್ನು ಇನ್ನಷ್ಟು ಗಟ್ಟಿ ಮಾಡುವ ಸಾಧ್ಯತೆಯನ್ನು ನಟನಾದವನು ಸದಾ ಶೋಧಿಸುತ್ತಿರಬೇಕು. ಅದೇ ಒಬ್ಬ ಕಲಾವಿದನನ್ನು ಗುಂಪಿನಲ್ಲಿ ಭಿನ್ನವಾಗಿಸುವ ಕಲೆ...’ ತಮ್ಮ ನಟನಾ ವೈಖರಿಯಿಂದ ರಂಗಭೂಮಿ, ಹಿರಿತೆರೆಯಲ್ಲಿ ಗುರುತಿಸಿಕೊಂಡಿರುವ ನಟ ಸಂಪತ್ ಕುಮಾರ್, ನಟನಾ ಕಲೆಯನ್ನು ಹೀಗೆ ವ್ಯಾಖ್ಯಾನಿಸುತ್ತಾರೆ.

ರಂಗಭೂಮಿಯೊಂದಿಗೆ ಸುಮಾರು 17 ವರ್ಷಗಳ ಒಡನಾಟ ಹೊಂದಿರುವ ಸಂಪತ್ ಕುಮಾರ್, ರಾಮನಗರದ ನಾರಾಯಣಪುರ ಎಂಬ ಪುಟ್ಟ ಹಳ್ಳಿಯವರು. ರೈತಾಪಿ ಕುಟುಂಬದಲ್ಲಿ ಹುಟ್ಟಿ ಬೆಳೆದು, ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿಗೆ ಬಂದ ಅವರಲ್ಲಿ ನಾಟಕದ ಗೀಳು ಹತ್ತಿಸಿದ್ದು ಸಂಜೆ ಕಾಲೇಜು. ಸಂಜೆ ಕಾಲೇಜಿಗೆ ಸೇರಿ ಪದವಿ ಓದುತ್ತಿದ್ದ ಅವರು ಜೀವನಕ್ಕಾಗಿ ಹಲವು ಕೆಲಸಗಳಿಗೆ ಕೈಹಾಕಿದರು. ದಿನಸಿ ಅಂಗಡಿ, ಐಸ್‌ಕ್ರೀಂ ಶಾಪ್ ಡೆಲಿವರಿ ಬಾಯ್, ಡ್ರೈವರ್ ಆಗಿ ಓದುತ್ತಲೇ ದುಡಿಮೆಗೆ ಇಳಿದರು.

ಪದವಿ ಮುಗಿಯುತ್ತಿದ್ದಂತೆ, ಮುಂದೇನೆಂಬ ಯೋಚನೆ. ಹಾಗೆ ಚಿಂತಿಸುತ್ತಿದ್ದಾಗಲೇ, ‘ನಾಟಕ ಮಾಡ್ತೀಯಾ?’ ಎಂಬ ಇಂಗ್ಲಿಷ್ ಪ್ರಾಧ್ಯಾಪಕರ ಪ್ರಶ್ನೆ, ಕಥೆ–ಕಾದಂಬರಿಗಳ ನಂಟು ಬೆಳೆಸಿಕೊಂಡಿದ್ದ ಸಂಪತ್ ಅವರನ್ನು ಮತ್ತಷ್ಟು ಹುರಿದುಂಬಿಸಿತು. ‘ಜೂಲಿಯಸ್ ಸೀಸರ್’ ನಾಟಕಾಭ್ಯಾಸವನ್ನು ಕಣ್ಣರಳಿಸಿಕೊಂಡು ನೋಡುತ್ತಿದ್ದ ಸಂಪತ್, ಅದೇ ಬೆರಗನ್ನಿಟ್ಟುಕೊಂಡೇ ರಂಗಭೂಮಿಗೆ ಕಾಲಿಟ್ಟರು.

ಹಳ್ಳಿಗಳಲ್ಲಿ ಪೌರಾಣಿಕ ನಾಟಕಗಳನ್ನು ನೋಡಿ ಬೆಳೆದಿದ್ದ ಸಂಪತ್ ಅವರಿಗೆ ಆಧುನಿಕ ರಂಗಭೂಮಿಯ ಬಾಗಿಲು ತೆರೆದದ್ದು ‘ಅಭಿನಯ ತರಂಗ’. ರಂಗತಂಡ ಸೇರಿ ನಾಟಕ ಲೋಕವನ್ನು ಆಪ್ತವಾಗಿ ಹಚ್ಚಿಕೊಂಡ ಅವರು, ರಂಗಾಯಣ ನಿರ್ದೇಶಕರಾಗಿದ್ದ ಬಸವಲಿಂಗಯ್ಯ ಅವರೊಡನೆ ಸೇರಿ ಸರ್ಕಾರಿ ಯೋಜನೆಗಳ ಹಲವು ಬೀದಿನಾಟಕಗಳಲ್ಲೂ ಅಭಿನಯಿಸಿದರು.

ಅದಾಗಲೇ ಇಪ್ಪತ್ತಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದ ಅವರಲ್ಲಿ, ಮತ್ತೆ ಓದುವ ಆಸಕ್ತಿ ಚಿಗುರೊಡೆಯಿತು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ರಂಗಭೂಮಿ ವಿಷಯದಲ್ಲಿಯೇ ಸ್ನಾತಕೋತ್ತರ ಪದವಿ ಪಡೆದದ್ದು, ರಂಗಭೂಮಿಯಲ್ಲಿನ ಅವರ ಹೊಸ ಹೊಳಹುಗಳಿಗೆ ನೀರೆರೆದಿತ್ತು. ‘ಜನಸಂಸ್ಕೃತಿ’ ಎಂಬ ತಂಡ ಕಟ್ಟಿಕೊಂಡು ಹಲವು ನಾಟಕಗಳಿಗೆ ಬಣ್ಣ ಹಚ್ಚಿದ್ದ ಅವರಿಗೆ ಧಾರಾವಾಹಿಗಳಲ್ಲಿ ನಟಿಸುವ ಅವಕಾಶಗಳೂ ಬಂದವು.

ನಾಗತಿಹಳ್ಳಿ ಚಂದ್ರಶೇಖರ್ ಅವರ ‘ಬೆಳ್ಳಿಚುಕ್ಕಿ’ ಮೂಲಕ ಕಿರುತೆರೆಗೆ ಕಾಲಿಟ್ಟವರು, ಸ್ವಲ್ಪ ಸಮಯದಲ್ಲೇ ರಂಗಭೂಮಿಗೆ ಮರಳಿದರು. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ